2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,
ಕನಕಪುರ

ಸಿಸಿ ನಂಃ 453 /2011

| | | | |
|---|---|---|---|
| ಚಾಸಾ ಃ | 6 | ಪ್ರಾಸಾಃ- | 4 |

| | |
|---|---|
| ಹೆಸರು | ಜ್ಯೋತಿ |
| ತಂದೆಯ ಹೆಸರು / ಗಂಡನ ಹೆಸರು | ಲೋಕೇಶ್ |
| ವಯಸ್ಸು | 31 |
| ಉದ್ಯೋಗ | ಗೃಹಿಣಿ |
| ವಿಳಾಸ | ಹಾಲಿ ವಾಸ ಚೆನ್ನೈ |

- - - - - - - - - - - - - - - - - - - - - - - - - - -

ದಿಃ 28.03.2017ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯವಿಚಾರಣೆ ಎಪಿಪಿ ರವರಿಂದಃ-

ಆರೋಪಿಗಳು ಗಲಾಟೆ ಕಾಲಕ್ಕೆ ನನಗೆ ಪರಿಚಯ. ಚಾಸಾ-1 ನನ್ನ ಬಾವ. ಚಾಸಾ-2 ನನ್ನ ಮಾವ . ಚಾಸಾ-3 ನನ್ನ ಅತ್ತೆ, ಚಾಸಾ-4 ನನ್ನ ಓರೆಗಿತಿ ಚಾಸಾ-5 ನನ್ನ ಪತಿ. ಚಾಸಾ-1ರಿಂದ 5, ನನಗೆ ಮತ್ತು ಆರೋಪಿಗಳಿಗೆ ದಿ.25-8-10ರಂದು ಗಲಾಟೆ ಆಗಿರುತ್ತದೆ. ಆಗ ನಾನು ನಮ್ಮ ಊರಾದ ದೊಡ್ಡಮುದುವಾಡಿ ಮನೆಯಲ್ಲಿ ಇದ್ದೆ. ಹಳೆಯ ದ್ವೇಷದ ಕಾರಣ ಗಲಾಟೆ ಮಾಡಿರುತ್ತಾರೆ . ಆದೇ ಸಮಯಕ್ಕೆ ನಾನು ಮತ್ತು ನನ್ನ ಗಂಡ ಚಾಸಾ-5 ಬೆಂಗಳೂರಿನಿಂದ ದೊಡ್ಡಮುದುವಾಡಿಗೆ ಬಂದಿದ್ದೆವು. ಚಾಸಾ5 ಬಟ್ಟೆ ಬದಲಾಯಿಸಲು ರೂಮಿಗೆ ಹೋಗಿದ್ದರು ಆಗ ಚಾಸಾ-2 ಮತ್ತು 3ರವರು ಹೊಡೆಬೇಡಿ ಎಂದು ಕಿರುಚಾಡುವ

ಶಬ್ದ ಕೇಳಿತು. ಏನು ಗಲಾಟೆ ಎಂದು ಚಾಸಾ-5ರವರು ಅಲ್ಲಿಗೆ ಹೋದರು. ಆಗ ಆರೋಪಿಗಳು ಗುಂಪು ಕಟ್ಟಿಕೊಂಡು ಬೋಳಿಮಗನೆ ನಿನಗೆ ಒಂದು ಗತಿ ಕಾಣಿಸುತ್ತೇನೆ ಎಂದು ಹೇಳಿ ಮನೆಯ ಹೊಸ್ತಿಲಿನಿಂದ ಚಾಸಾ-5ರವರನ್ನು ಹೊರಕ್ಕೆ ಎಳೆದುಕೊಂಡು ಹೋದರು. ಆರೋಪಿ-1 ರಾಡಿನಿಂದ ಚಾಸಾ-5ರವರ ತಲೆಗೆ ಹೊಡೆದು ರಕ್ತಗಾಯಪಡಿಸಿದರು. ನಂತರ ಆರೋಪಿಗಳು ಬಿಡದೆ ಮನಸ್ಸಿಗೆ ಬಂದಂತೆ ರಾಡು, ರೀಪೀಸ್ ಪಟ್ಟಿ ಮತ್ತು ಮಚ್ಚಿನಿಂದ ಮೈಕೈಮೇಲೆ ಹೊಡೆದರು. ಹೊಡೆತಕ್ಕೆ ಚಾಸಾ5ರವರ ಎಡ ಮೂಳೆ ಮುರಿದಿದ್ದು ರಾಡು ಹಾಕಲಾಗುತ್ತದೆ. ಬಿಡಿಸಿಕೊಳ್ಳಲು ಹೋದ ಚಾಸಾ-4ರವರನ್ನು ಆರೋಪಿಗಳು ತಳ್ಳಿಹಾಕಿ ಕೆಳಕ್ಕೆ ಕೆಡವಿ ಕೋಲು ಮತ್ತು ರಾಡಿನಿಂದ ಬೆನ್ನು ಕಾಲಿನ ಮೇಲೆಲ್ಲಾ  ಹೊಡೆದರು. ಚಾಸಾ-4ರವರಿಗೆ ಸೊಂಟಕ್ಕೆ ಏಟಾಗಿದ್ದು ಏಳಲು ಆಗುತ್ತಿರಲಿಲ್ಲ, ಗಲಾಟೆಯಲ್ಲಿ ಚಾಸಾ-2ರವರಿಗೆ ಕಾಲಿಗೆ ಏಟಾಗಿ ಬಲಗಾಲು ಮುರಿದು ಪಡಸಾಲೆಯಲ್ಲಿ ಮಲಗಿದ್ದರು. ಅವರಿಗೆ ಮೇಲೆ ಏಳಲು ಆಗುತ್ತಿರಲಿಲ್ಲ, ಆರೋಪಿಗಳು ಚಾಸಾ-3ರವರಿಗೆ ಮಚ್ಚು ಕೋಲು, ರೀಪೀಸ್ ಪಟ್ಟಿ  ರಾಡಿನಿಂದ ತಲೆ, ಬಲಭುಜ, ಬೆನ್ನು, ಮತ್ತು ಕಾಲುಗಳಿಗೆ ಹೊಡೆದಿದ್ದು ರಕ್ತಗಾಯ ಆಗಿರುತ್ತದೆ. ಮತ್ತು ಪ್ರಜ್ಞೆ ತಪ್ಪಿರುತ್ತಾರೆ. ಅಷ್ಟರಲ್ಲಿ ಬಂದ ಚಾಸಾ-1ರವರಿಗೆ ಆರೋಪಿಗಳು ಕಲ್ಲಿನಿಂದ ಮೂತಿಗೆ ಹೊಡೆದಿದ್ದು ತುಟಿಗಳಿಗೆ ಏಟಾಗಿರುತ್ತದೆ ಹಾಗೂ ಒಂದು ಹಲ್ಲು ಮುರಿದಿದ್ದು ರಕ್ತಗಾಯವಾಗಿರುತ್ತದೆ. ನಂತರ ಆರೋಪಿಗಳು ಮನೆಯೊಳಗೆ ನುಗ್ಗಿ ಬೀರುವಿನಲ್ಲಿ ಇದ್ದ 500ಗ್ರಾಂ ಒಡವೆಗಳನ್ನು ಮತ್ತು ರೂ. 1ಲಕ್ಷವನ್ನು ತೆಗೆದುಕೊಂಡರು.

ಚಾಸಾ—1ರವರು ಕೇಳಲು ಹೋದಾಗ ಆರೋಪಿಗಳು ಮಚ್ಚನ್ನು ತೋರಿಸಿ ಮುಂದೆ ಬಂದರೆ ಸಾಯಿಸುವುದಾಗಿ ಜೀವ ಬೆದರಿಕೆ ಹಾಕಿದರು. ಸಾಕ್ಷಿ ನ್ಯಾಯಾಲಯದ ಮುಂದಿರುವ ಎಂಓ-1ರಿಂದ 7ನ್ನು ನೋಡಿ ಗುರ್ತಿಸಿ ಅವುಗಳಿಂದ ಆರೋಪಿಗಳು ಹಲ್ಲೆ ಮಾಡಿರುವುದಾಗಿ ಹೇಳುತ್ತಾರೆ.

ಪಾಟೀ ಸವಾಲುಃ ಸಮಯ ಕೋರಿದ್ದು ನೀಡಲಾಯಿತು .

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

2ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಕನಕಪುರ.

ಓ ಹೇ ಕೇ ಸ ಇ